**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೦೮.೦೯.೨೦೧೫ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೮ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೮ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಸೆಪ್ಟೆಂಬರ್ ೦೮, ೨೦೧೫ರ ಮಂಗಳವಾರ ಬೆಳಿಗ್ಗೆ ೧೧.೩೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. | **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. | **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೭. | **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೮. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೯. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೧೦. | **ಶ್ರೀ ಮತ್ತೀಗೌಡ ಸಿ.,** ಹಿರಿಯ | |
| ೧೧. | **ಪ್ರೊ. ಎಂ.ಕೆ. ಶ್ರೀಧರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೧. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 27ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 27ನೇ ಸಭೆಯು ದಿನಾಂಕ: 30.06.2015ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ಪ್ರಶಾಸನ ಸಮಿತಿ 27ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**<br>**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯ ಸಂಖ್ಯೆ: 06 'ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳು 16ನೇ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಲು** |

| | | |
|---|---|---|
| | | ಅನುಮತಿ ನೀಡಿರುವ ಬಗ್ಗೆ' ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾಲಯದ ನಿಯಮಗಳನ್ನು ಗಮನಿಸಿ, ಪ್ರಯಾಣಭತ್ಯೆಯನ್ನು ಪಾವತಿಗೆ ಸೂಚಿಸಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು. |
| ವಿಷಯ 02 | **ಪಾಲಿ ಇನ್‌ಸ್ಟಿಟ್ಯೂಟ್, ಕಲಬುರಗಿ –ಈ ಸಂಸ್ಥೆಗೆ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡುವಂತೆ ಕೋರಿ ಕಲಬುರಗಿಯ ಪಾಲಿ ಇನ್‌ಸ್ಟಿಟ್ಯೂಟ್ ಸಂಸ್ಥೆಯು ಅರ್ಜಿಯನ್ನು ಸಲ್ಲಿಸಿತ್ತು. ಸಂಸ್ಥೆಯ ಕೋರಿಕೆಯಂತೆ, ಸಂಶೋಧನಾ ಕೇಂದ್ರ ಮಾನ್ಯತೆ ಪರಿಶೀಲನಾ ಸಮಿತಿಯನ್ನು ರಚಿಸಿ, ಸಂಸ್ಥೆಗೆ ಭೇಟಿ ನೀಡಿ ಪರಿಶೀಲಿಸಿ, ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಸಮಿತಿಯು ನೀಡಿದ ಪರಿಶೀಲನಾ ವರದಿಯ ಶಿಫಾರಸ್ಸಿನಂತೆ, ಪಾಲಿ ಇನ್‌ಸ್ಟಿಟ್ಯೂಟ್ ಸಂಸ್ಥೆಗೆ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. | ಪಾಲಿ ಇನ್‌ಸ್ಟಿಟ್ಯೂಟ್ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರ್ಥಿಕ ಸಹಾಯವಿಲ್ಲದೆ, 'ಸಂಶೋಧನಾ ಕೇಂದ್ರ' ಮಾನ್ಯತೆ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು. |
| ವಿಷಯ 03 | **ಡೆವಲಪ್‌ಮೆಂಟ್ ಫೌಂಡೇಶನ್, ಬೆಂಗಳೂರು–ಈ ಸಂಸ್ಥೆಗೆ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡುವಂತೆ ಕೋರಿ ಬೆಂಗಳೂರಿನ ಡೆವಲಪ್‌ಮೆಂಟ್ ಫೌಂಡೇಶನ್ ಸಂಸ್ಥೆಯು ಅರ್ಜಿಯನ್ನು ಸಲ್ಲಿಸಿತ್ತು. ಸಂಸ್ಥೆಯ ಕೋರಿಕೆಯಂತೆ, ಸಂಶೋಧನಾ ಕೇಂದ್ರ ಮಾನ್ಯತೆ ಪರಿಶೀಲನಾ ಸಮಿತಿಯನ್ನು ರಚಿಸಿ, ಸಂಸ್ಥೆಗೆ ಭೇಟಿ ನೀಡಿ ಪರಿಶೀಲಿಸಿ, ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಸಮಿತಿಯು ನೀಡಿದ ಪರಿಶೀಲನಾ ವರದಿಯ ಶಿಫಾರಸ್ಸಿನಂತೆ, ಡೆವಲಪ್‌ಮೆಂಟ್ ಫೌಂಡೇಶನ್ ಸಂಸ್ಥೆಗೆ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ' ಮಾನ್ಯತೆಯನ್ನು ನೀಡಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. | ಡೆವಲಪ್‌ಮೆಂಟ್ ಫೌಂಡೇಶನ್ ಸಂಸ್ಥೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರ್ಥಿಕ ಸಹಾಯವಿಲ್ಲದೆ, 'ಸಂಶೋಧನಾ ಕೇಂದ್ರ' ಮಾನ್ಯತೆ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು. |
| ವಿಷಯ 04 | **ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿಗೆ ಶಿಕ್ಷಣತಜ್ಞರ ಸಮಿತಿಯು ಆಯ್ಕೆ ಮಾಡಿರುವ ವಿದ್ವಾಂಸರ ಪಟ್ಟಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 27ನೇ ಸಭೆಯ ನಿರ್ಣಯದಂತೆ, ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿಗೆ ವಿದ್ವಾಂಸರನ್ನು ಆಯ್ಕೆ ಮಾಡಲು ಶಿಕ್ಷಣತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದಸ್ಯರಾದ ಪ್ರೊ. ಎಚ್.ಪಿ. ದೇವಕಿ ಅವರು ಸಭೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂದು ತಿಳಿಸಿದ ಹಿನ್ನೆಲೆಯಲ್ಲಿ, ಅವರ ಸ್ಥಾನಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಂ. ಶಿವಕುಮಾರಸ್ವಾಮಿ ಅವರನ್ನು ನೇಮಿಸಲಾಗಿತ್ತು. ಈ ಸಮಿತಿಯು ದಿನಾಂಕ: 20.08.2015ರಂದು ಸಭೆ ಸೇರಿ ಮೂವರು ವಿದ್ವಾಂಸರನ್ನು ಆಯ್ಕೆ ಮಾಡಿದ್ದು, ವಿದ್ವಾಂಸರ ಪಟ್ಟಿಯನ್ನು ಕುಲಾಧಿಪತಿಗಳ ಅನುಮೋದನೆಗಾಗಿ ಕಳುಹಿಸಿಕೊಡಲಾಗಿದೆ. ಈ ಮಧ್ಯೆ, ಗೌರವ ಡಿ.ಲಿಟ್ ಪದವಿಗೆ ಆಯ್ಕೆಯಾದ ಪ್ರೊ. ಪಂಡರಿನಾಥಾಚಾರ್ಯ ಗಲಗಲಿ ಅವರು ನಿಧನರಾದ ಹಿನ್ನೆಲೆಯಲ್ಲಿ, ಮತ್ತೊಬ್ಬ ವಿದ್ವಾಂಸರ ಆಯ್ಕೆಗಾಗಿ ಶಿಕ್ಷಣತಜ್ಞರ ಸಮಿತಿ ಸಭೆಯನ್ನು ಕರೆಯಲು ಕ್ರಮವಹಿಸಲಾಗುತ್ತಿದೆ. ಈ ವಿಷಯವನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದೆ. | ಶೀಘ್ರವೇ ಶಿಕ್ಷಣತಜ್ಞರ ಸಮಿತಿ ಸಭೆಯನ್ನು ಕರೆದು, ಕ್ರಮವಹಿಸಲು ಸಭೆಯು ಸೂಚಿಸಿತು. ಮಾತ್ರವಲ್ಲ, ಆ ಸಂದರ್ಭ ಬಂದಾಗ ಹಿಂದಿನ ಸಭೆಯಲ್ಲಿ ಸೂಚಿತ ಹೆಸರುಗಳೊಂದಿಗೆ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರ ಹೆಸರನ್ನು ಸೇರಿಸಿಕೊಳ್ಳುವುದಕ್ಕೆ ಸಭೆಯು ಅನುಮೋದಿಸಿತು. |
| ವಿಷಯ 05 | **ಡಾ. ವಿ. ವೆಂಕಟರಮಣ ಭಟ್ – ಇವರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿಗಾಗಿ ಡಾ. ವಿ. ವೆಂಕಟರಮಣ ಭಟ್ ಅವರು **'ಸಾಮಶಿಕ್ಷಾಭಾರತಿ'** ಎಂಬ ಶೋಧಪ್ರಬಂಧವನ್ನು | ಡಾ. ವಿ. ವೆಂಕಟರಮಣ ಭಟ್– ಇವರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿ ನೀಡಲು ಸಭೆಯು ಅನುಮೋದಿಸಿತು. |

| | | |
|---|---|---|
| | ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು. ದಿನಾಂಕ: 07.04.2015ರಂದು ಬಾಹ್ಯ ಹಾಗೂ ಆಂತರಿಕ ವಿಷಯ ತಜ್ಞರು ಈ ಶೋಧಪ್ರಬಂಧದ ಕುರಿತು ಶೈಕ್ಷಣಿಕ ಸಂವಾದವನ್ನು ನಡೆಸಿ, ಈ ಶೋಧಪ್ರಬಂಧಕ್ಕೆ ಡಿ.ಲಿಟ್ ಪದವಿಯನ್ನು ನೀಡಲು ಶಿಫಾರಸ್ಸು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ನಾಲ್ಕನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಡಾ. ವಿ. ವೆಂಕಟರಮಣ ಭಟ್ ಅವರಿಗೆ ಡಿ.ಲಿಟ್ ಪದವಿ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 06 | **2013–14ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ ಬಿ.ಎ., ಎಂ.ಎ., ಮತ್ತು ಎಂ.ಫಿಲ್ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡುವ ಬಗೆಗೆ.**<br>2013–14ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ ಬಿ.ಎ. (ವಿದ್ವನ್ಮಧ್ಯಮಾ)–350 ವಿದ್ಯಾರ್ಥಿಗಳು, ಎಂ.ಎ. (ವಿದ್ವದುತ್ತಮಾ)–250 ವಿದ್ಯಾರ್ಥಿಗಳು ಹಾಗೂ ಎಂ.ಫಿಲ್ (ವಿಶಿಷ್ಟಾಚಾರ್ಯ)–09 ವಿದ್ಯಾರ್ಥಿಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಾಲ್ಕನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 07 | **2013–14ನೇ ಸಾಲಿನ ಪರೀಕ್ಷೆಗಳಲ್ಲಿ ಶಾಸ್ತ್ರವಾರು ಅತಿಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ವರ್ಣಪದಕ ಪುರಸ್ಕಾರವನ್ನು ನೀಡುವ ಬಗೆಗೆ.**<br>ರಾಜ್ಯದ ವಿವಿಧ ಸಂಸ್ಥೆಗಳು ಬೇರೆ ಬೇರೆ ಶಾಸ್ತ್ರಗಳಲ್ಲಿ ಅತಿಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸ್ವರ್ಣಪದಕ ಪುರಸ್ಕಾರವನ್ನು ನೀಡಲು ದತ್ತಿನಿಧಿ ಸ್ಥಾಪಿಸಿದ್ದು, 2013–14ನೇ ಸಾಲಿನ ಪರೀಕ್ಷೆಗಳಲ್ಲಿ ಶಾಸ್ತ್ರವಾರು ಅತಿಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಒಂಭತ್ತು ವಿದ್ಯಾರ್ಥಿಗಳಿಗೆ ನಾಲ್ಕನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಸ್ವರ್ಣಪದಕ ಪುರಸ್ಕಾರ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಪ್ರಶಾಸನ ಸಮಿತಿ 25ನೇ ಸಭೆಯ ನಿರ್ಣಯದಂತೆ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ–ಇವರಿಗೆ ಪತ್ರ ಬರೆಯಲಾಗಿತ್ತು. ಆದರೆ, ಹೆಚ್ಚಿನ ಮೊತ್ತ ನೀಡಲು ಶ್ರೀಮಠವು ನಿರಾಕರಿಸಿ, ಈಗಾಗಲೇ ನೀಡಿರುವ ಮೊತ್ತದಲ್ಲೇ ಸ್ವರ್ಣಪದಕ ನೀಡಲು ಕೋರಿರುವ ಹಿನ್ನೆಲೆಯಲ್ಲಿ, ಮಠವು ನೀಡಿರುವ ರೂ. 40,000/–, ಬಡ್ಡಿಮೊತ್ತ ರೂ. 10,000/–; ಒಟ್ಟು **ರೂ. 50,000/–**ಗಳನ್ನು ಸ್ಥಿರನಿಧಿ ಠೇವಣಿ ಇರಿಸಿದೆ. ಈ ಮೊತ್ತಕ್ಕೆ ಸ್ವೀಕೃತವಾಗುವ ಬಡ್ಡಿಮೊತ್ತಕ್ಕೆ ಮಾರುಕಟ್ಟೆ ದರಗಳನ್ವಯ ಲಭ್ಯವಾಗುವ ಆಕಾರದ ಸ್ವರ್ಣಪದಕವನ್ನು ನೀಡಲು ಕ್ರಮವಹಿಸಲಾಗುವುದು. | **ಸ್ವರ್ಣಪದಕ ಪುರಸ್ಕಾರವನ್ನು ನೀಡಲು ಸಭೆಯು ಅನುಮೋದಿಸಿತು. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠವು ನೀಡಿರುವ ರೂ. 50000/–ಗಳಿಗೆ ಬರುವ ಬಡ್ಡಿಹಣದಲ್ಲಿಯೇ ಚಿಕ್ಕದಾಗಿ ಸ್ವರ್ಣಪದಕವನ್ನು ನೀಡಲು ತನ್ನ ಒಪ್ಪಿಗೆ ಸೂಚಿಸಿತು.** |
| ವಿಷಯ 08 | **ಪ್ರಶಿಕ್ಷಣ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಿಕ್ಷಣ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.08.2015ರಂದು ನಡೆಯಿತು. ಈ ಸಭೆಯಲ್ಲಿ ಹಲವು ವಿಷಯಗಳು ಚರ್ಚಿತವಾಗಿ ನಿರ್ಣಯಗೊಂಡವು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ಪ್ರಶಿಕ್ಷಣ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯ ನಡಾವಳಿಯನ್ನು ಪರಿಶೀಲಿಸಿತು. ವಿಷಯ ಸಂಖ್ಯೆ: 04 ಮತ್ತು 05ಕ್ಕೆ ಸಂಬಂಧಿಸಿದಂತೆ, ತಿದ್ದುಪಡಿಗಳನ್ನು ಸೂಚಿಸಿ ಅನುಮೋದನೆಯನ್ನು ನೀಡಿತು.** |
| ವಿಷಯ 09 | **ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಚಾಯಿಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಶಿಕ್ಷಣ ಪರಿಷತ್ತಿನ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಚಾಯಿಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಅಳವಡಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 30.06.2015ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಂತರ ಮಾನ್ಯ ಸದಸ್ಯರುಗಳು ಚರ್ಚಿಸಿ, ನಿರ್ಣಯವನ್ನು ಕೈಗೊಂಡಿದ್ದಾರೆ. ಪ್ರಶಾಸನ ಸಮಿತಿ 27ನೇ ಸಭೆಯಲ್ಲಿ ಮಂಡಿಸಲಾದ ಪ್ರಶಿಕ್ಷಣ ಪರಿಷತ್ತಿನ 15ನೇ ಸಭೆಯ ನಡಾವಳಿಯಲ್ಲಿ ಈ ವಿಷಯವು ಬಿಟ್ಟುಹೋಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಸಭೆಯು ಪ್ರಶಿಕ್ಷಣ ಪರಿಷತ್ತಿನ ನಡಾವಳಿಗೆ ತನ್ನ ಅನುಮೋದನೆಯನ್ನು ನೀಡಿತು. |
| ವಿಷಯ 10 | **ಉನ್ನತ ಶಿಕ್ಷಣದಲ್ಲಿ 'ರಾಷ್ಟ್ರೀಯ ಸೇವಾ ಯೋಜನೆ'ಯನ್ನು ಒಂದು ಐಚ್ಛಿಕ ವಿಷಯವಾಗಿಸುವ ಬಗೆಗೆ.**<br>ದಿನಾಂಕ: 10.10.2013ರಂದು ನಡೆದ ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯ | ಸಭೆಯು ಅನುಮೋದಿಸಿತು. |

| | | |
|---|---|---|
| | 62ನೇ ಸಭೆಯು ಚರ್ಚಿಸಿದಂತೆ, ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಯನ್ನು ಉನ್ನತ ಶಿಕ್ಷಣದಲ್ಲಿ ಒಂದು ಐಚ್ಛಿಕ ವಿಷಯವಾಗಿ ಪರಿಗಣಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ನಿರ್ಣಯಿಸಿದೆ. ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಸೇವಾ ಯೋಜನೆಯನ್ನು ಉನ್ನತ ಶಿಕ್ಷಣದಲ್ಲಿ ಕ್ರೆಡಿಟ್ ಬೇಸ್ಡ್ ಐಚ್ಛಿಕ ವಿಷಯವಾಗಿ ಪರಿಚಯಿಸಲು ಭಾರತ ಸರ್ಕಾರದ ಯುವಜನ ಮತ್ತು ಕ್ರೀಡಾ ಸಚಿವಾಲಯವು ಪಾಠ್ಯಕ್ರಮವನ್ನು ಸಿದ್ಧಪಡಿಸಿದೆ. ವಿದ್ಯಾರ್ಥಿಗಳು ಇದರ ಲಾಭ ಪಡೆಯುವಂತಾಗಲು, ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೊಳಿಸುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗವು ಮಾನ್ಯ ಕುಲಪತಿಗಳಿಗೆ ಬರೆದ D.O. No. F. 1-7/2011(CPP-II), ದಿ: 13.08.2015 ಪತ್ರದಲ್ಲಿ ಸೂಚಿಸಿದೆ. ಈ ವಿಷಯವನ್ನು ಸಭೆಯ ಅವಗಾಹನೆ ಹಾಗೂ ಮುಂದಿನ ಕ್ರಮವಹಿಸಲು ಅನುಮೋದನೆಗಾಗಿ ಮಂಡಿಸಿದೆ. | |
| ವಿಷಯ 11 | **ವಿದ್ಯಾರ್ಥಿಗಳ ಆನ್‌ಲೈನ್ ಪ್ರವೇಶ, ಪರೀಕ್ಷಾ ಶುಲ್ಕ ಪಾವತಿ –ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇಂಡಸ್ ಇಂಡ್ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ಬಗೆಗೆ.**<br>ಇಂಡಸ್ ಇಂಡ್ ಬ್ಯಾಂಕಿನ ವ್ಯವಸ್ಥಾಪಕರು ಈಗಾಗಲೇ ಹಲವು ಬಾರಿ ಭೇಟಿ ಮಾಡಿ, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಆನ್‌ಲೈನ್ ಪ್ರವೇಶ, ಪರೀಕ್ಷಾ ಶುಲ್ಕ ಪಾವತಿ, ಕ್ರೋಢೀಕೃತ ಅಂಕಪಟ್ಟಿ ಶುಲ್ಕ, ವಲಸೆ ಪ್ರಮಾಣಪತ್ರ, ಪದವಿ ಪ್ರಮಾಣಪತ್ರ ಶುಲ್ಕ, ಮರುಮೌಲ್ಯಮಾಪನ ಶುಲ್ಕ –ಇತ್ಯಾದಿ ಶುಲ್ಕಗಳನ್ನು ಅವರ ಬ್ಯಾಂಕಿನ ಮೂಲಕ ಪಾವತಿಸಲು ಅನುವಾಗುವಂತೆ ವಿಶ್ವವಿದ್ಯಾಲಯದ ಖಾತೆಯನ್ನು ತೆರೆಯಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಈ ಸೇವೆಗಳಿಗೆ ಬ್ಯಾಂಕು ಯಾವುದೇ ತರಹದ ಶುಲ್ಕವನ್ನು ವಿಧಿಸುವುದಿಲ್ಲ ಎಂದು ತಿಳಿಸಿದ್ದಾರೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ICT Initiativesನಂತೆ, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ಶೈಕ್ಷಣಿಕ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕವೇ ನಿರ್ವಹಿಸಬೇಕೆಂದು ಸೂಚನೆ ನೀಡಿರುವ ಹಿನ್ನೆಲೆಯಲ್ಲಿ, ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಇಂಡಸ್ ಇಂಡ್ ಬ್ಯಾಂಕ್‌ನಲ್ಲಿ ವಿಶ್ವವಿದ್ಯಾಲಯದ ಖಾತೆಯನ್ನು ತೆರೆಯಲು ಸಭೆಯ ಅನುಮತಿಗಾಗಿ ಮಂಡಿಸಿದೆ. | **ಇಂಡಸ್‌ಇಂಡ್ ಬ್ಯಾಂಕಿನಲ್ಲಿ 'ಹಣಕಾಸು ಅಧಿಕಾರಿ, ಕ.ಸಂ.ವಿ.' ಹೆಸರಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಖಾತೆಯನ್ನು ತೆರೆಯಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 12 | **ಅನುದಾನಿತ ಹಾಗೂ ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ನಿಯಮಾವಳಿಯನ್ನು ರಚಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 30 ಘಟಕ/ ಅನುದಾನಿತ/ಅನುದಾನರಹಿತ ಸಂಸ್ಕೃತ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಿಗೆ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಮಾನ್ಯತೆಯನ್ನು ನೀಡಬೇಕಾಗಿರುತ್ತದೆ. ಆದರೆ, ಇಲ್ಲಿಯವರೆಗೂ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಒಂದು ಸ್ಪಷ್ಟ ನಿಯಮಾವಳಿಯನ್ನು ರೂಪಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಒಂದು ಉಪಸಮಿತಿಯನ್ನು ರಚಿಸಿ, ಆ ಸಮಿತಿಯು ಮಾನ್ಯತೆ ನವೀಕರಣಕ್ಕೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು ರೂಪಿಸಲು ಸಭೆಯ ಅನುಮೋದನೆಯನ್ನು ಕೋರಿದೆ. | **Form-02, Grant-In-Aide Code ಹಾಗೂ ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ರೂಪಿಸಿರುವ ನಿಯಮಗಳನ್ನು ಮಾದರಿಯಾಗಿಟ್ಟುಕೊಂಡು, ಅನುದಾನಿತ ಹಾಗೂ ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ನಿಯಮಾವಳಿಯನ್ನು ರಚಿಸಲು ಕೆಳಕಂಡ ಸದಸ್ಯರನ್ನು ಒಳಗೊಂಡ ಉಪಸಮಿತಿಯನ್ನು ರಚಿಸಲು ಸಭೆಯು ಸೂಚಿಸಿತು.**<br>**1. ಒಬ್ಬರು ಡೀನರು – ಸದಸ್ಯರು**<br>**2. ಒಬ್ಬರು ಸದಸ್ಯರು, ಪ್ರಶಿಕ್ಷಣ ಪರಿಷತ್ – ಸದಸ್ಯರು**<br>**3. ಅನುದಾನಿತ ಸಂಸ್ಕೃತ ಕಾಲೇಜಿನ ಒಬ್ಬರು ಪ್ರಾಚಾರ್ಯರು – ಸದಸ್ಯರು**<br>**4. ಸಹಾಯಕ ಕುಲಸಚಿವರು – ಸಂಚಾಲಕರು** |

| | | |
|---|---|---|
| ವಿಷಯ 13 | **ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸುವ ಹಿನ್ನೆಲೆಯಲ್ಲಿ ಉಪಸಮಿತಿಯನ್ನು ರಚಿಸುವ ಬಗೆಗೆ.**<br>ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರದಂತೆ, ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು –ಈ ಎರಡು ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸಬೇಕಾದ ಹಿನ್ನೆಲೆಯಲ್ಲಿ, ಬೋಧಕ ಸಿಬ್ಬಂದಿಗಳ ಯುಜಿಸಿ ಬಾಕಿವೇತನ ಮತ್ತು ನೂತನ ವೇತನಶ್ರೇಣಿಯ ನಿಗದೀಕರಣ ಮಾಡಲು ಕೆಳಕಂಡ ತಜ್ಞರ ಉಪಸಮಿತಿಯನ್ನು ರಚಿಸಲು ಸಭೆಯ ಅನುಮೋದನೆಯನ್ನು ಕೋರಿದೆ.<br>1. **ಪ್ರೊ. ಪದ್ಮಾಶೇಖರ್,** ಕುಲಪತಿಗಳು, ಕ.ಸಂ.ವಿ. – ಅಧ್ಯಕ್ಷರು<br>2. **ಪ್ರೊ. ಆರ್.ಆರ್. ಕುಲಕರ್ಣಿ,** ನಿವೃತ್ತ ಪ್ರಾಂಶುಪಾಲರು – ಸದಸ್ಯರು<br>3. **ಶ್ರೀ ಕುಮಾರ್,** ಮಾಜಿ ಅಧೀಕ್ಷಕರು, ಎಂ.ಎಲ್.ಎ. ಕಾಲೇಜು – ಸದಸ್ಯರು<br>4. **ಶ್ರೀ ಬಿ.ಎಸ್. ಜಾಪಾಲಿ,** ನಿವೃತ್ತ ಉಪಕಾರ್ಯದರ್ಶಿಗಳು, ಉ.ಶಿ.ಇ. –ಸದಸ್ಯರು<br>5. **ವಿದ್ವಾನ್ ಪಿ.ಆರ್. ಪಾಗೋಜಿ,** ಉಪಕುಲಸಚಿವರು – ಸದಸ್ಯರು<br>6. **ಪ್ರೊ. ಎಂ.ಕೆ. ಶ್ರೀಧರ್,** ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು | **ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ವೇತನಶ್ರೇಣಿಯನ್ನು ಜಾರಿಗೊಳಿಸಲು ಉಪಸಮಿತಿಯನ್ನು ರಚಿಸುವುದಕ್ಕೆ ಸಭೆಯು ಅನುಮೋದನೆ ನೀಡಿತು. ಈ ಉಪಸಮಿತಿಯು ಆದಷ್ಟೂ ಬೇಗ ವರದಿಯನ್ನು ಸಲ್ಲಿಸಲು ಸಭೆಯು ಸೂಚಿಸಿತು.** |
| ವಿಷಯ 14 | **ಕನ್ನಡ–ಜೈನ ಕಾವ್ಯಗಳು ಮತ್ತು ಸಂಸ್ಕೃತ ಕಾವ್ಯಗಳ ಸಂಬಂಧ ವಿಚಾರಗೋಷ್ಠಿಯನ್ನು ಡಿಸೆಂಬರ್ ತಿಂಗಳಿನಲ್ಲಿ ಆಯೋಜಿಸುವ ಬಗೆಗೆ.**<br>ಕನ್ನಡ ಹಾಗೂ ಸಂಸ್ಕೃತ ಭಾಷಾ–ಸಾಹಿತ್ಯದ ಪರಸ್ಪರ ಕೊಡುಕೊಳುವಿಕೆ ಹಲವು ಶತಮಾನಗಳಿಂದ ನಡೆದುಕೊಂಡು ಬಂದಿದೆ. ಇದರೊಂದಿಗೆ ಜೈನ ಕಾವ್ಯಗಳೂ ಸಹ ತಮ್ಮದೇ ಆದ ಸೇವೆಯನ್ನು ಸಲ್ಲಿಸಿವೆ. ಈ ಹಿನ್ನೆಲೆಯಲ್ಲಿ ಕನ್ನಡ–ಜೈನ ಕಾವ್ಯಗಳು ಮತ್ತು ಸಂಸ್ಕೃತ ಕಾವ್ಯಗಳ ಪರಸ್ಪರ ಸಂಬಂಧವನ್ನು ಕುರಿತಂತೆ ಒಂದು ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು 2015ರ ಡಿಸೆಂಬರ್ ಮೊದಲ ವಾರದಲ್ಲಿ ಜೈನಮಠಗಳ ಸಹಯೋಗದೊಂದಿಗೆ ಆಯೋಜಿಸಲು ಸಭೆಯ ಅನುಮತಿಗಾಗಿ ಮಂಡಿಸಿದೆ. | **'ಕನ್ನಡ–ಜೈನ ಕಾವ್ಯಗಳು ಮತ್ತು ಸಂಸ್ಕೃತ ಕಾವ್ಯಗಳ ಸಂಬಂಧ' ಕುರಿತ ವಿಚಾರಗೋಷ್ಠಿಯನ್ನು ಆಯೋಜಿಸಲು ಸಭೆಯು ಅನುಮೋದಿಸಿತು.** |
| ವಿಷಯ 15 | **'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ಪುನಾರಚಿಸುವ ಬಗೆಗೆ.**<br>ಮಾನ್ಯ ಕುಲಾಧಿಪತಿಗಳು ಹಾಗೂ ಕರ್ನಾಟಕ ಸರ್ಕಾರದ ಮಹಿಳಾ ಆಯೋಗದ ಸೂಚನೆಯಂತೆ ವಿಶ್ವವಿದ್ಯಾಲಯದಲ್ಲಿ 'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ರಚಿಸಲಾಗಿತ್ತು. ಈ ಸಮಿತಿಯನ್ನು ಪುನಾರಚಿಸಿದ್ದು, ಕೆಳಕಂಡ ಸದಸ್ಯರನ್ನು ನೇಮಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>1. **ಡಾ. ವನಿತಾ ರಾಮಸ್ವಾಮಿ,** ಪ್ರಶಾಸನ ಸಮಿತಿ ಸದಸ್ಯರು – ಅಧ್ಯಕ್ಷರು<br>2. **ಡಾ. ಕೆ.ಆರ್. ಸಂಧ್ಯಾರೆಡ್ಡಿ,** ಸರ್ಕಾರೇತರ ಸಂಸ್ಥೆ – ಸದಸ್ಯರು<br>3. **ಶ್ರೀಮತಿ ಭಾರತೀ ಸಿಂಗ್,** ಸಂಸ್ಥಾಪಕರು, ಸಾ–ಮುದ್ರ ಫೌಂಡೇಶನ್ – ಸದಸ್ಯರು<br>4. **ಶ್ರೀಮತಿ ಪ್ರೀತಿ ಡಿ. ನಾಯಕ್,** ನ್ಯಾಯವಾದಿಗಳು – ಸದಸ್ಯರು<br>5. **ವಿದುಷಿ ಜ್ಯೋತಿ ಎಚ್.ಪಿ.,** ಯೋಜನಾ ಸಹಾಯಕರು – ಸದಸ್ಯರು<br>6. **ಶ್ರೀಮತಿ ಟಿ. ಉಮಾ,** ಗ್ರೂಪ್ ಡಿ ನೌಕರರು – ಸದಸ್ಯರು<br>7. **ವಿದುಷಿ ಅನುಪಮಾ ಬಿ.,** ಸಹಾಯಕ ಪ್ರಾಧ್ಯಾಪಕರು – ಸದಸ್ಯ ಕಾರ್ಯದರ್ಶಿ | **'ಮಹಿಳಾ ದೌರ್ಜನ್ಯ ತಡೆ ಸಮಿತಿ'ಯನ್ನು ಪುನಾರಚಿಸುವುದಕ್ಕೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು.** |
| ವಿಷಯ 16 | **ಶ್ರೀ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ರಾಜೇಂದ್ರನಗರ, ಚಿತ್ರದುರ್ಗ –ಈ ಕಾಲೇಜಿನ ಮಾನ್ಯತೆ ನವೀಕರಣ ಮಾಡುವ ಬಗೆಗೆ.**<br>ಶ್ರೀ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ರಾಜೇಂದ್ರನಗರ, ಚಿತ್ರದುರ್ಗ –ಈ ಕಾಲೇಜು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂಸ್ಥೆಯಾಗಿದ್ದು, ಇದನ್ನು ಶ್ರೀ ಪೂರ್ಣಪ್ರಜ್ಞ ವಿದ್ಯಾಸಂಸ್ಥೆ (ರಿ.), ಚಿತ್ರದುರ್ಗ ನಡೆಸುತ್ತಿದೆ. 1993ರಲ್ಲಿ ಸ್ಥಾಪಿಸಲ್ಪಟ್ಟು ರಿಜಿಸ್ಟರ್ಡ್ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಸರ್ಕಾರದ ಪತ್ರದಂತೆ ಈ ಸಂಸ್ಥೆಗೆ ಪ್ರಾರಂಭದಿಂದಲೇ ಅನುದಾನಸಹಿತ ಅನುಮೋದನೆ ನೀಡಿದ್ದು, 1995–96ರಿಂದ ಹೊಸದಾಗಿ ಸಂಸ್ಕೃತ ಕಾಲೇಜು ಆರಂಭಿಸಿ, ಸಾಹಿತ್ಯ, ಅಲಂಕಾರ, ಜ್ಯೋತಿಷ, ವ್ಯಾಕರಣ, ವೇದಾಂತ ಶಾಸ್ತ್ರಗಳಲ್ಲಿ ವಿದ್ವನ್ಮಧ್ಯಮಾ ಒಂದನೇ ತರಗತಿಗಳನ್ನು ಆರಂಭಿಸಲು ಅನುಮತಿ ನೀಡಿತ್ತು. (ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ6 | **ಶ್ರೀ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಚಿತ್ರದುರ್ಗ–ಈ ಕಾಲೇಜಿಗೆ 2015–16ನೇ ಸಾಲಿಗೆ ಮಾನ್ಯತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ತ್ರಿಸದಸ್ಯ ಸಮಿತಿಯನ್ನು ತಕ್ಷಣವೇ ರಚಿಸಲು ಸಭೆಯು ಸೂಚಿಸಿತು. ಈ ಸಮಿತಿಯು ಕಾಲೇಜಿಗೆ ಭೇಟಿ ನೀಡಿ, ಪರಿಶೀಲನಾ ವರದಿಯನ್ನು ಸಲ್ಲಿಸಿದ ನಂತರ ಮಾನ್ಯತೆಯನ್ನು ನೀಡಲು ಸೂಚಿಸಿತು. ಮಾನ್ಯತೆ ನೀಡಿದ** |

| | | |
|---|---|---|
| | ಯುಡಿವಿ 2011 ದಿನಾಂಕ: 4.06.2012ರಂತೆ 2 ಬೋಧಕ ಹಾಗೂ 4 ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರವು ಅನುಮೋದನೆ ನೀಡಿತ್ತು.) ಆದರೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತ್ರಿಸದಸ್ಯ ಸಮಿತಿಯು ಭೇಟಿ ನೀಡಿದಾಗ ಮೂರು ಕಾರಣಾಂತರಗಳಿಂದ ವೇತನ ಬಿಲ್ಲನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿದರೂ ಅವರ ವೇತನ ಬಿಡುಗಡೆಯಾಗಿರಲಿಲ್ಲ. ಆದ್ದರಿಂದ 2 ಬೋಧಕ ಹಾಗೂ 4 ಬೋಧಕೇತರ ಸಿಬ್ಬಂದಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದು, ವಿಚಾರಣೆಯಲ್ಲಿದೆ. ಪಾಠ ಪ್ರವಚನಗಳು ಸರಿಯಾಗಿ ನಡೆಯದೇ, ಆ ಸಂಸ್ಥೆಯಲ್ಲಿ ಪೂರ್ಣಾವಧಿ ಅಧ್ಯಾಪಕರಿಲ್ಲದಿದ್ದ ಕಾರಣ ಉಳಿದ ಹುದ್ದೆಗಳನ್ನು ತುಂಬಿಕೊಳ್ಳಲು ಆಡಳಿತ ಮಂಡಳಿಯು ಮನವಿಯನ್ನು ಸಲ್ಲಿಸಿತ್ತು (06 ಬೋಧಕ 02 ಬೋಧಕೇತರ). ಮಾನ್ಯ ಪ್ರಭಾರ ಕುಲಪತಿಗಳ ಆದೇಶದಂತೆ ಮಾರ್ಚ್ 2015ರಲ್ಲಿ ತ್ರಿಸದಸ್ಯ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಕಾಲೇಜಿನ ಪುನಾರಂಭ, ಮಾನ್ಯತೆ ನವೀಕರಣ ಹಾಗೂ ಹುದ್ದೆಗಳನ್ನು ತುಂಬಿಕೊಳ್ಳುವ ಬಗೆಗೆ ವರದಿ ನೀಡಿತ್ತು. ಆ ವರದಿಯನ್ವಯ ಕಾಲೇಜು ಪುನಃ ಆರಂಭವಾಗಿದ್ದು, ಆಡಳಿತ ಮಂಡಳಿಯು ಮಾನ್ಯತೆ ನವೀಕರಣ ಹಾಗೂ ಹುದ್ದೆಗಳನ್ನು (2014–15ರವರೆಗೆ) ತುಂಬಿಕೊಳ್ಳುವ ಬಗೆಗೆ ಪ್ರಸ್ತಾವವನ್ನು ಸಲ್ಲಿಸಿದ್ದು, ಸಭೆಗೆ ಮಂಡಿಸಿದೆ. | **ನಂತರ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆಯನ್ನು ಪಡೆದು, ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಸಲು ಕ್ರಮವಹಿಸಬಹುದೆಂದು ಸಭೆಯು ಸೂಚಿಸಿತು.** |

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:**

| | |
|---|---|
| ವಿಷಯ 01 | **ಯುಜಿಸಿ ವೇತನಶ್ರೇಣಿಯ ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸೃಜಿಸಿರುವ ಯುಜಿಸಿ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ಪೈಕಿ, ಸೂಕ್ತ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದ, **03 ಸಹ ಪ್ರಾಧ್ಯಾಪಕ** (ಪರಿಶಿಷ್ಟ ಜಾತಿ – 01; ಪರಿಶಿಷ್ಟ ಪಂಗಡ – 01; ಪ್ರವರ್ಗ 1 – 01) ಹುದ್ದೆಗಳನ್ನು ದಿನಾಂಕ: 03.03.2014ರಂದು ನಡೆದ ಪ್ರಶಾಸನ ಸಮಿತಿ 20ನೇ ಸಭೆಯ ಅನುಮೋದನೆಯಂತೆ ಹಾಗೂ **02 ಸಹಾಯಕ ಪ್ರಾಧ್ಯಾಪಕ** (ಪರಿಶಿಷ್ಟ ಪಂಗಡ – 01; ಪ್ರವರ್ಗ 2ಬಿ – 01) ಹುದ್ದೆಗಳನ್ನು ದಿನಾಂಕ: 11.11.2013ರಂದು ನಡೆದ ಪ್ರಶಾಸನ ಸಮಿತಿ 17ನೇ ಸಭೆಯ ಅನುಮೋದನೆಯಂತೆ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ (ಸಂಖ್ಯೆ: KSU: UGC-PS/Teaching-Non Teaching Apmnt./2014-15; Date: 05.11.2014) ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನಕಾರ್ಯ ಮುಕ್ತಾಯಗೊಂಡಿದ್ದು, ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 2015ರ ಸೆಪ್ಟೆಂಬರ್ 7ರಂದು ಸಂದರ್ಶನವನ್ನು ನಡೆಸಲಾಯಿತು. ಈ ಆಯ್ಕೆ ಸಮಿತಿ ಸಂದರ್ಶನದ ಶಿಫಾರಸ್ಸುಗಳನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಯುಜಿಸಿ ವೇತನಶ್ರೇಣಿಯ ಬೋಧಕ 'ಸಹ ಪ್ರಾಧ್ಯಾಪಕ' ಮತ್ತು 'ಸಹಾಯಕ ಪ್ರಾಧ್ಯಾಪಕ' ಹುದ್ದೆಗಳಿಗೆ 2015ರ ಸೆಪ್ಟೆಂಬರ್ 07ರಂದು ನಡೆದ 'ಆಯ್ಕೆಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಒಂದೊಂದು ನಿಕಾಯಕ್ಕೆ ಯೋಜನೆ, ಸಂಶೋಧನೆ ಮತ್ತು ಬೋಧನೆ –ಇವುಗಳಿಗೆ ಅನುಗುಣವಾಗಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ಅಧಿಸೂಚನೆ ಅನ್ವಯ ಹಾಗೂ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ 'Statute Governing the Appointment of Professor, Associate Professor, Assistant Professor and Librarians & conduct of Interview to Teaching, Academic Staff & Other Allied posts under section 38(II) of the Karnataka Samskrit University Act, 2009' (ಸಂಖ್ಯೆ: ಇಡಿ 8 ಯುಡಿಎಸ್ 2012; ದಿನಾಂಕ: 20.03.2013)ರ Sec. 7.1; 7.2; 9.1; 10; 11; 12 & 16 ಇವುಗಳಲ್ಲಿರುವ ಎಲ್ಲಾ ನಿಯಮಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಸಭೆಯು ಸಂಪೂರ್ಣವಾಗಿ ಎಲ್ಲ ವಿವರಗಳನ್ನು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆ, ಸಂಶೋಧನ ಅನುಭವ ಹಾಗೂ ಇತರೆ ಅರ್ಹತೆಗಳನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆ ತನ್ನ ಅನುಮೋದನೆಯನ್ನು ನೀಡಿತು.**<br>**ಉಳಿದಂತೆ ಗ್ರಂಥಪಾಲಕ (ಮೀಸಲುರಹಿತ), ಸಹ ಪ್ರಾಧ್ಯಾಪಕ (ಪರಿಶಿಷ್ಟ ಜಾತಿ) ಹಾಗೂ ಸಹಾಯಕ ಪ್ರಾಧ್ಯಾಪಕ (ಪ್ರವರ್ಗ 2ಬಿ) –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.** |

| ಕ್ರ.ಸಂ. | ಹುದ್ದೆ | ನಿಕಾಯ | ಆಯ್ಕೆಯಾದ ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಮೀಸಲಾತಿ |
|---|---|---|---|---|
| **01.** | ಸಹ ಪ್ರಾಧ್ಯಾಪಕ | ಭಾಷಾ ನಿಕಾಯ | ಡಾ. ಪಾಲಯ್ಯ ಸಿ.<br>ಸಹಾಯಕ ಪ್ರಾಧ್ಯಾಪಕರು | ಪರಿಶಿಷ್ಟ ಪಂಗಡ |

| | | | | |
|---|---|---|---|---|
| | | | ಎಫ್–14, ಅಪಾರ್ಟ್‌ಮೆಂಟ್ ಟೈಪ್ ಕ್ವಾರ್ಟರ್ಸ್<br>ಪಾಂಡಿಚೇರಿ ವಿಶ್ವವಿದ್ಯಾಲಯ ಆವರಣ<br>ಕಳಾಪೇಟ್, ಪಾಂಡಿಚೇರಿ – 605014 | |
| **02.** | **ಸಹ ಪ್ರಾಧ್ಯಾಪಕ** | **ಶಾಸ್ತ್ರ ನಿಕಾಯ** | **ಡಾ. ವಿ ಶೀಬಾ / ಶಿವಾನಿ ವಿ.**<br>ಉಪನಿರ್ದೇಶಕರು, ಚಿನ್ಮಯಾ ಇಂಟರ್‌ನ್ಯಾಷನಲ್ ಫೌಂಡೇಶನ್ ಶೋಧ ಸಂಸ್ಥಾನ, ಆದಿಶಂಕರನಿಲಯಂ<br>ವೆಳಿಯಾನಾಡು, ಎರ್ನಾಕುಲಂ – 682313 | **ಪ್ರವರ್ಗ 1** |
| **03.** | **ಸಹಾಯಕ ಪ್ರಾಧ್ಯಾಪಕ** | **ವೇದಾಂತ ನಿಕಾಯ** | **ಡಾ. ಭಜಹರಿ ದಾಸ್**<br>ಗೋಪಾಲನಗರ ವಿಲೇಜ್, ರಘುನಾಥಗಂಜಿ ಪೋಸ್ಟ್<br>ಮುರ್ಷಿದಾಬಾದ್ ಜಿಲ್ಲೆ, ಪಶ್ಚಿಮ ಬಂಗಾಳ – 742225 | **ಪರಿಶಿಷ್ಟ ಜಾತಿ** |

ವಿಷಯ 02

**ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**

ದಿನಾಂಕ: 28.01.2014ರಂದು ನಡೆದ ಪ್ರಶಾಸನ ಸಮಿತಿ 18ನೇ ಸಭೆ ಹಾಗೂ ದಿನಾಂಕ: 03.03.2014ರಂದು ನಡೆದ ಪ್ರಶಾಸನ ಸಮಿತಿ 20ನೇ ಸಭೆಯ ನಿರ್ಣಯದಂತೆ, ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿದ್ದ ರಾಜ್ಯ ವೇತನಶ್ರೇಣಿಯ ಬೋಧಕೇತರ ಸಹಾಯಕ ಕುಲಸಚಿವ, ಕಂಪ್ಯೂಟರ್ ಆಪರೇಟರ್, ಟೆಲಿಫೋನ್ ಆಪರೇಟರ್ ಮತ್ತು ಕಾವಲುಗಾರ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ (ಸಂಖ್ಯೆ: ಕಸಂವಿ/ಆವಿ/ಸಿಬ್ಬಂದಿ–1/2014–15; ದಿನಾಂಕ: 05.11.2014) ಹೊರಡಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 25 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 2015ರ ಸೆಪ್ಟೆಂಬರ್ 07ರಂದು ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ

**ರಾಜ್ಯ ವೇತನಶ್ರೇಣಿಯ ಬೋಧಕೇತರ (ಬ್ಯಾಕ್‌ಲಾಗ್) ಸಹಾಯಕ ಕುಲಸಚಿವ, ಕಂಪ್ಯೂಟರ್ ಆಪರೇಟರ್ ಮತ್ತು ಗ್ರೂಪ್ ಡಿ (ಕಾವಲುಗಾರ) ಹುದ್ದೆಗಳಿಗೆ ದಿನಾಂಕ: 07 ಸೆಪ್ಟೆಂಬರ್ 2015ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಸಭೆಯು ಪರಿಶೀಲಿಸಿತು. ಈ ಹುದ್ದೆಗಳ ನೇಮಕಾತಿಗೆ ಈಗಾಗಲೇ ನಾಲ್ಕು ಬಾರಿ ಅಧಿಸೂಚನೆ (ದಿನಾಂಕ: 16.07.2012, 10.01.2013, 28.05.2013 ಮತ್ತು 09.01.2014) ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದರೂ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಹಿನ್ನೆಲೆಯಲ್ಲಿ, ಈ ಬಾರಿ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಲ್ಲಿ, ಅರ್ಹರಾದ ಒಬ್ಬೊಬ್ಬ ಅಭ್ಯರ್ಥಿಗಳನ್ನೇ ಸಂದರ್ಶನಕ್ಕೆ ಆಹ್ವಾನಿಸಿರುವುದನ್ನು ಸಭೆಯು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಟೆಲಿಫೋನ್ ಆಪರೇಟರ್ ಹುದ್ದೆಗೆ ಸೂಕ್ತ ಅಭ್ಯರ್ಥಿ ಅರ್ಜಿ ಸಲ್ಲಿಸದೇ ಇರುವುದರಿಂದ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

| ಕ್ರ.ಸಂ. | ಹುದ್ದೆ | ಆಯ್ಕೆಯಾದ ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಮೀಸಲಾತಿ |
|---|---|---|---|
| **01.** | **ಸಹಾಯಕ ಕುಲಸಚಿವ** | **ವೆಂಕಟೇಶ್ ವಿ.**<br>S/o. ವೆಂಕಟಗಂಗಯ್ಯ<br>ರಮಾನಂದನಗರ, ಜಿ. ನಾಗತಿಹಳ್ಳಿ ಅಂಚೆ, ನಾಗಮಂಗಲ ತಾಲ್ಲೂಕು<br>ಮಂಡ್ಯ ಜಿಲ್ಲೆ – 571811 | **ಪರಿಶಿಷ್ಟ ಜಾತಿ** |
| **02.** | **ಕಂಪ್ಯೂಟರ್ ಆಪರೇಟರ್** | **ನಾಗೇಂದ್ರಮೂರ್ತಿ ಆರ್.**<br>S/o. ರಾಜಶೇಖರಮೂರ್ತಿ ಸಿ.<br># 4/303, ಮಠದ ಬೀದಿ, ಕೊಳ್ಳೇಗಾಲ, ಕೊಳ್ಳೇಗಾಲ ತಾಲ್ಲೂಕು<br>ಚಾಮರಾಜನಗರ ಜಿಲ್ಲೆ – 571440 | **ಸಾಮಾನ್ಯ** |
| **03.** | **ಗ್ರೂಪ್ ಡಿ (ಕಾವಲುಗಾರ)** | **ಮೊಹಮ್ಮದ್ ಮುದಾಸೀರ್**<br>S/o. ಮೊಹಮ್ಮದ್ ರಫೀಕ್<br>ವಾರ್ಡ್–23, ನ್ಯೂ ಮಸ್ಜಿದ್ ಮೊಹಲ್ಲಾ<br>ಮಾಗಡಿ – 562120, ರಾಮನಗರ ಜಿಲ್ಲೆ | **ಪ್ರವರ್ಗ 2ಬಿ** |

ವಿಷಯ 03

**ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಗ್ರಂಥಾಲಯದ ಪುಸ್ತಕಗಳ ಗಣಕೀಕರಣ ಮಾಡಿಸುವ ಬಗೆಗೆ.**

ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಗ್ರಂಥಾಲಯದ ಪುಸ್ತಕಗಳ ಗಣಕೀಕರಣವನ್ನು ನಿಯಮಾನುಸಾರ ಕ್ರಮಕೈಗೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ

**ಸರ್ಕಾರದ ನಿಯಮಗಳನುಸಾರ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಗ್ರಂಥಾಲಯದ ಪುಸ್ತಕಗಳ ಗಣಕೀಕರಣ ಮಾಡಲು ಸಭೆಯು**

| | | |
|---|---|---|
| | ಮಂಡಿಸಿದೆ. ವಿಶ್ವವಿದ್ಯಾಲಯದ 2015–16ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಆಡಳಿತ (ಲೆಕ್ಕಶೀರ್ಷಿಕೆ: 002) ಅಡಿಯಲ್ಲಿ ಗ್ರಂಥಾಲಯ ನಿರ್ವಹಣೆ / ಪುಸ್ತಕ ಖರೀದಿ / ಡಿಜಿಟೈಸೇಷನ್ ಲೈಬ್ರರಿ –ಇವುಗಳ ಸಲುವಾಗಿ ರೂ. 15 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. | **ಒಪ್ಪಿಗೆಯನ್ನು ಸೂಚಿಸಿತು.** |
| ವಿಷಯ 04 | **ನಾಲ್ಕನೇ ಘಟಿಕೋತ್ಸವದ ಅಂದಾಜು ವೆಚ್ಚವನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಾಲ್ಕನೆಯ ಘಟಿಕೋತ್ಸವವನ್ನು ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಘಟಿಕೋತ್ಸವಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಸಮಾರಂಭಕ್ಕಾಗಿ **ರೂ. 7.05** ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದ್ದು, ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಮಂಡಿಸಿದೆ. | **ನಾಲ್ಕನೇ ಘಟಿಕೋತ್ಸವಕ್ಕೆ ಸಂಬಂಧಿಸಿದ ಅಂದಾಜು ವೆಚ್ಚಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 05 | **ಪ್ರೊ. ಶ್ರೀನಿವಾಸ ವರಖೇಡಿ –ಇವರನ್ನು 'ಅಧಿನಿಯಮ ಮತ್ತು ಪರಿನಿಯಮ ಪರಿಶೀಲನ ಸಮಿತಿ'ಯ ಸಂಚಾಲಕರನ್ನಾಗಿ ನೇಮಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರಚಿಸಿರುವ ಹಾಗೂ ರಚಿಸುತ್ತಿರುವ ಅಧಿನಿಯಮ ಮತ್ತು ಪರಿನಿಯಮಗಳ ಪರಿಶೀಲನೆಗಾಗಿ, ದಿನಾಂಕ: 28.10.2014 ರಂದು ನಡೆದ ಪ್ರಶಾಸನ ಸಮಿತಿ 23ನೇ ಸಭೆಯ ನಿರ್ಣಯದಂತೆ 'ಅಧಿನಿಯಮ ಮತ್ತು ಪರಿನಿಯಮ ಪರಿಶೀಲನ ಸಮಿತಿ'ಯನ್ನು ರಚಿಸಲಾಗಿತ್ತು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಪಿ. ವಿನಯ್ ಅವರನ್ನು ಈ ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಗಿತ್ತು. ಪ್ರೊ. ಶ್ರೀನಿವಾಸ ವರಖೇಡಿ ಅವರನ್ನು ಈ ಸಮಿತಿಯ ಸಂಚಾಲಕರನ್ನಾಗಿ ನೇಮಕ ಮಾಡಲು ಅನುಮತಿ ನೀಡುವಂತೆ ಮಾನ್ಯ ಕುಲಪತಿಗಳು ಸಭೆಯ ಮುಂದೆ ಮಂಡಿಸಿದರು. | **ಪ್ರೊ. ಶ್ರೀನಿವಾಸ ವರಖೇಡಿ ಅವರನ್ನು 'ಅಧಿನಿಯಮ ಮತ್ತು ಪರಿನಿಯಮ ಪರಿಶೀಲನ ಸಮಿತಿ'ಯ ಸಂಚಾಲಕರನ್ನಾಗಿ ನೇಮಕ ಮಾಡಲು ಸಭೆಯು ಅನುಮತಿ ನೀಡಿತು.** |

**ಪ್ರೊ. ಎಂ.ಕೆ. ಶ್ರೀಧರ್**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು